# 8

# "ರಾಜ್ಯವೂ ಬಲವೂ ಮಹಿಮೆಯೂ ನಿನ್ನದು"

ಮತ್ತಾಯ 6:9-13ರಲ್ಲಿ ಶಿಷ್ಯರ ಪ್ರಾರ್ಥನೆಯು ಅಮೇರಿಕನ್ ಸ್ಟ್ಯಾಂಡರ್ಡ್ ಆವೃತ್ತಿಯಲ್ಲಿ "ಕೇಡಿನಿಂದ ನಮ್ಮನ್ನು ತಪ್ಪಿಸು" ಎಂಬುದರಿಂದ ಮುಕ್ತಾಯವಾಗುತ್ತದೆ. ಹಾಗಿದ್ದರೂ ನ್ಯೂ ಅಮೇರಿಕನ್ ಸ್ಟ್ಯಾನ್‌ಡರ್ಡ್ ಬೈಬಲ್ ಈ ಸುಂದರವಾದ ಮುಕ್ತಾಯವನ್ನು ಒಳಗೊಂಡಿದೆ: " '... [ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲ ನಿನ್ನವೇ, ಆಮೆನ್]' " (ಮತ್ತಾಯ 6:13).

ಈ ಮಾತುಗಳು ಪ್ರೇರೇಪಣೆಯಿಲ್ಲದ ಕೂಡಿಸುವಿಕೆ ಎಂದು ಜೆ. ಡಬ್ಲ್ಯೂ. ಮಕ್‌ಗರ್ವಿ ಸಂಪೂರ್ಣವಾಗಿ ನಂಬಿದ್ದರು. "ಈ ಸ್ತೋತ್ರ ಗೀತವು ಒಳ್ಳೇ ತಳಹದಿಯ ಮೇಲೆ, ಇಲ್ಲದ್ದು ಸೇರಿಸಲ್ಪಟ್ಟಿದ್ದರಂತೆ ತಿರಸ್ಕರಿಸಲ್ಪಟ್ಟಿದೆ" ಎಂದು ಅವರು ಹೇಳುತ್ತಾರೆ.[1] *ASV*ಯ ಭಾಷಾಂತರಕಾರರು ಈ ಅಂತಿಮ ಪದಗಳನ್ನು ಕೂಡಿಸುವದಕ್ಕಾಗಿ ಕೆಲವು ಪುರಾವೆಯಿದೆಯೆಂದು ನಾವು ತಿಳಿಯಬೇಕೆಂದು ಬಯಸಿದರು. ಯಾಕಂದರೆ ಅವರ ಅಡಿಟಿಪ್ಪಣೆಯಲ್ಲಿ ಹೀಗಿದೆ: "ಅನೇಕ ಅಧಿಕೃತ ಮೂಲಗಳು, ಕೆಲವು ಪುರಾತನವಾದವುಗಳು, ಆದರೆ ಭಿನ್ನತೆಗಳೊಂದಿಗಿದ್ದು ಇದನ್ನು ಕೂಡಿಸಿವೆ: *ಯಾಕಂದರೆ ರಾಜ್ಯವು ಮತ್ತು ಬಲವು ಮತ್ತು ಮಹಿಮೆಯು ಸದಾಕಾಲ ನಿನ್ನವೇ, ಆಮೆನ್.*"

ಆ ಪುರಾತನ ಅಧಿಕೃತವಾದವುಗಳಲ್ಲಿ ಕೆಲವುಗಳಲ್ಲಿ ಪರಿಚಿತವಾದ ಮುಕ್ತಾಯವು ಬಹಳವಾಗಿ ಗೌರವಿಸಲ್ಪಟ್ಟಿವೆ: ಮಾತುಗಳು "W" ಇಲ್ಲವೇ "Washington" (ಅದು ವಾಶಿಂಗ್ಟನ್ ಡಿ. ಸಿ. ಯಲ್ಲಿ ಇಡಲ್ಪಟ್ಟದ್ದರಿಂದ) ಎಂದು ಕರೆಯಲ್ಪಟ್ಟ ಕೈಬರಹದ ಪ್ರತಿಯಲ್ಲಿ ಕಂಡುಬಂದಿದೆ. ಆಲ್ಬರ್ಟ್ ಹುಕ್[2] ಎಂಬವರು *"W"* ಮೂಲಪ್ರತಿಯ ದಿನಾಂಕವನ್ನು ಐದನೆಯ ಶತಮಾನವೆಂದು ಹೇಳಿದ್ದಾರೆ. ಆದರೆ *ಇಂಟರ್‌ನ್ಯಾಶನಲ್ ಸ್ಟಾಂಡರ್ಡ್ ಬೈಬಲ್ ಎನ್‌ಸೈಕ್ಲೋಪಿಡಿಯಾವು*[3] "ಅದು ಬಹುಶ ನಾಲ್ಕನೆಯ ಶತಮಾನ" ಎಂದು ಹೇಳುತ್ತಾನೆ. ಉದ್ದವಾದ ಅಂತ್ಯವು ಸಹ *Theta*[4] ಗ್ರೀಕ್ ಕೈಬರಹದ ಪ್ರತಿಯಲ್ಲಿ (ಇದು ಏಳನೆಯ ಮತ್ತು ಒಂಭತ್ತನೆಯ ಶತಮಾನದ ಮಧ್ಯದಲ್ಲಿ) ಇರುತ್ತದೆ. ಇತ್ತೀಚಿನ ಪಾಂಡಿತ್ಯವು *Theta*ಕ್ಕೆ ಹೆಚ್ಚಿನ ಬಲವನ್ನು ಕೊಡುತ್ತದೆ. ಪರಿಚಿತವಾದ ಮುಕ್ತಾಯವು ಹಳೇ ಲ್ಯಾಟಿನ್ ಕೈಬರಹದ ಪ್ರತಿ *f* ದಲ್ಲಿ ಕಂಡು ಬರುತ್ತದೆ. ಅದು ಆರನೆಯ ಶತಮಾನದಲ್ಲಿ ಇದ್ದದ್ದಾಗಿದೆ. ಅದು ಪೆಶಿಟ್ಟಾ ಸಿರಿಯಾಕ್‌ದಲ್ಲಿಯೂ ಕಂಡು ಬರುತ್ತದೆ. ಅದರ ಬಗ್ಗೆ ಸಹೋದರ ಮಕ್‌ಗರ್ವಿ ಹೀಗೆ ಹೇಳಿದ್ದಾರೆ:

> ಅದು ನಮ್ಮ ಯುಗದ ಎರಡನೆಯ ಶತಮಾನದಲ್ಲಿ ಮಾಡಲ್ಪಟ್ಟಿದೆಯೆಂದು ಸಿದ್ಧಪಡಿಸಿ ತೋರಿಸಲು ಅನೇಕ ಪುರಾವೆಗಳು ಒಂದು ಗೂಡಿಸಲ್ಪಟ್ಟಿವೆ, ಮತ್ತು ಹೊಸ ಒಡಂಬಡಿಕೆಯನ್ನು ಕುರಿತು ಮೂಲ ಬರಹಗಾರರ ಲೆಕ್ಕಾಣಿಯಿಂದ ಸುಮಾರು ಒಂದು ನೂರು ವರ್ಷಗಳ ಮೊದಲು ವರ್ಗಾಯಿಸಿದ ಗ್ರೀಕ್ ಪಠ್ಯದಿಂದ ಬಂದಿರುತ್ತದೆ. ಅದರ ದಿನಾಂಕದಿಂದ ಇಲ್ಲಿಯವರೆಗೆ ಅದು

ಸಿರಿಯನ್ ಕ್ರೈಸ್ತರ ಹುದುವಾದ ಬೈಬಲ್ ಆಗಿತ್ತು. ಹಾಗೂ ಅವರು ತಮ್ಮ ಪ್ರತ್ಯೇಕವಾದ ಆರಾಧನೆಯಲ್ಲಿ ಮಾತ್ರವೇ ಉಪಯೋಗಿಸಿದರು. ... ಬೈಬಲ್ ವಿಮರ್ಶಕರ ಉದ್ದೇಶಗಳಿಗಾಗಿ ಎಲ್ಲಾ ಭಾಷಾಂತರಗಳಿಗಿಂತ ಅದು ಹೆಚ್ಚು ಮೌಲ್ಯವುಳ್ಳದ್ದಾಗಿದೆ.[5]

ಸುಂದರವಾದ ಸ್ತುತಿ ಗೀತವು ಹಲವಾರು ಪುರಾತನ ಕೈಬರಹದ ಪ್ರತಿಗಳಲ್ಲಿ ಇದ್ದರೂ ಹೆಚ್ಚು ಮುಖ್ಯವಾದವುಗಳು ಅದನ್ನು ಬಿಟ್ಟುಬಿಡುತ್ತವೆ. ಹೀಗಿದ್ದರೂ ಪ್ರಶ್ನೆಯಲ್ಲಿರುವ ಪದಗಳಿಂದ ಪ್ರಕಟಿಸಲ್ಪಟ್ಟ ಆಲೋಚನೆಗಳು ಪರಿಶುದ್ಧ ಬರಹಕ್ಕೆ ಸಂಬಂಧಿಸಿವೆ (ನೋಡಿರಿ 1 ಪೂರ್ವಕಾಲವೃತ್ತಾಂತ 29:11ಣಿ 2 ತಿಮೊಥೆ 4:18ಣಿ ಯೂದ 25). ಈ ಮಾತುಗಳ ಸಂಗ್ರಹವು ಒಂದು ಕೂಡಿಸುವಿಕೆಯಾಗಿದೆ ಎಂಬುದು ಯಾರಿಗೂ ನಿಶ್ಚಿತವಾಗದೇ ಇರುವದರಿಂದ, ಅದಕ್ಕಾಗಿ ಒಂದು ಪಾಠವು ಸಮರ್ಪಿಸಲ್ಪಟ್ಟದ್ದು, ದುರುಪಯೋಗ ಪಡಿಸಲ್ಪಟ್ಟದ್ದಾಗುವದಿಲ್ಲ.

"ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲವೂ ನಿನ್ನದೇ. ಆಮೆನ್" *NASB* ಎಂದು ನೀವು ಹೇಳುವಾಗ, ಮೆಚ್ಚಿಕೆಯ, ಸ್ತೋತ್ರದ ಹಾಗೂ ಭಯಭಕ್ತಿಯ ಆಳವಾದ ಭಾವನೆಯು ನಿಮ್ಮ ಹೃದಯಗಳನ್ನು ತುಂಬಬೇಕು. ಅನಧೀನಕತೆಯ ಭಾವನೆಯನ್ನು ನೀವು ತೆಗೆದು ಹಾಕಿರುವಿರಿ ಮತ್ತು ದೇವರ ಪಾದಗಳ ಬಳಿಯಲ್ಲಿ ನಿಮ್ಮನ್ನು ಸಂಪೂರ್ಣವಾಗಿ ಎಸೆಯುತ್ತಿರುವಿರಿ. ನಿಮ್ಮ ನಾಲಿಗೆಯು ಮುಖಸ್ತುತಿಯೊಂದಿಗೆ ಹರಿಯುತ್ತಿರುವುದು. ಒಂದು ಜನರ ಗುಂಪಿನ ಮುಂದೆ ಇಲ್ಲವೇ ಏಕಾಂತದಲ್ಲಿ ಬಾಯಿಪಾಠ ಮಾಡುವ ಪ್ರಾರ್ಥನೆಯಂತೆ ಕೇವಲ ಪುನ ಪುನ ಹೇಳಲ್ಪಟ್ಟಾಗ ಈ ಪದಗಳು ಅಪಹಾಸ್ಯದವುಗಳೂ ವ್ಯರ್ಥವಾದವುಗಳೂ ಆಗುತ್ತವೆ. ಆದರೆ ಅವು ದೀನತೆಯ ಮತ್ತು ಕೃತಜ್ಞತೆಯ ಹೃದಯದ ಆಳದಿಂದ ಬರುವಾಗ ಗೌರವದ ಉದಾತ್ತ ದೋಷಾರೋಪಣೆ ಯಿರುವದಿಲ್ಲ.

## "ರಾಜ್ಯದ" ಅರ್ಥ

"ನಿನ್ನ ರಾಜ್ಯ" ಎಂದು ನೀವು ಹೇಳುವಾಗ ನಿಮಗೆ ಅದರ ಅರ್ಥವೇನಾಗುತ್ತದೆ? ಪ್ರಾರ್ಥಿಸಲು ಯೇಸು ತನ್ನ ಶಿಷ್ಯರಿಗೆ ಕಲಿಸಿದಾಗ, ರಾಜ್ಯವು ಅಸ್ತಿತ್ವದಲ್ಲಿ ಇರಲಿಲ್ಲವೆಂದು ನಮಗೆ ತಿಳಿದದೆ. ರಾಜ್ಯವು ಬರತಕ್ಕದ್ದೆಂದು ಪ್ರಾರ್ಥಿಸಬೇಕೆಂದು ಆತನು ಬಯಸಿದ್ದನು. ಹಾಗಾದರೆ ಈ ಅಂತಿಮ ಚಿನ್ನಹವು ರಾಜ್ಯವು ಅಸ್ತಿತ್ವದಲ್ಲಿದೆ ಹಾಗೂ ಆಗಲೇ ದೇವರಿಗೆ ಒಳಪಟ್ಟಿದೆ ಎಂದು ಮಾತಾಡುವಾಗ ಯಾವ ಅರ್ಥವಾಗುತ್ತದೆ? ಜೋಸೆಫ್ ಹೆನ್ರಿ ಥಾಯರ್[6] ಎಂಬವರು "ರಾಜ್ಯ" ಎಂದು ಭಾಷಾಂತರಿಸಿದ್ದು ಗ್ರೀಕ್ ಪದವು *basileia* ಎಂಬುದರ ಅರ್ಥ "ಒಂದು ರಾಜ್ಯ" ಎಂದಷ್ಟೇ ಆಗುವದಿಲ್ಲ, ಆದರೆ "ರಾಜಯೋಗ್ಯ ಶಕ್ತಿ, ಅರಸೊತ್ತಿಗೆ, ಪ್ರಭುತ್ವ, ಆಳಿಕೆ" ಎಂದೂ ಆಗುತ್ತದೆ ಎಂದು ಹೇಳುತ್ತಾರೆ. ಆಗ ಅಸ್ತಿತ್ವದಲ್ಲಿ ಇಲ್ಲದ *basileia*ವು ವಾಗ್ದಾನ ಮಾಡಲ್ಪಟ್ಟಿತು ("ನಿನ್ನ ರಾಜ್ಯವು ಬರಲಿ"ಣಿ ಮತ್ತಾಯ 6:10). ಈ ರಾಜ್ಯವು ಪ್ರಾರ್ಥನೆಯ ವಿಷಯವಾಗಿ ಮಾಡಲ್ಪಡಬೇಕೆಂದು ಯೇಸುವು ತನ್ನ ಶಿಷ್ಯರಿಗೆ ಹೇಳುತ್ತಿದ್ದನು. ಆಗಲೇ ಅಸ್ತಿತ್ವದಲ್ಲಿರುವ *basileia*ವೂ ಇತ್ತು ("ರಾಜ್ಯವು ನಿನ್ನದಾಗಿದೆ"). ಅದು ಯಾವುದು? ನಿಶ್ಚಯವಾಗಿಯೂ, ಪರಲೋಕದ ದೇವರು ಏರ್ಪಡಿಸುವನು ಎಂದು ದಾನಿಯೇಲನು ಹೇಳಿದ ರಾಜ್ಯವು ಇದಾಗಿರಲಿಲ್ಲ (ದಾನಿಯೇಲ 2:44)ಣಿ ಕ್ರಿ.ಶ. 30ರಲ್ಲಿಯ ಪಂಚಾಶತ್ತಮ ದಿನಕ್ಕಿಂತ ಎಷ್ಟೋ ಮೊದಲು ಆಗಲೇ ದೇವರಿಗೆ ಒಳಪಟ್ಟ ಒಂದು ರಾಜ್ಯವು ಅಸ್ತಿತ್ವದಲ್ಲಿತ್ತು. ಒಂದು ಸಾವಿರ ವರ್ಷಗಳ ಮೊದಲು, "ಯೆಹೋವನೇ, ರಾಜ್ಯವು ನಿನ್ನದು" (1 ಪೂರ್ವಕಾಲವೃತ್ತಾಂತ 29:11)

ಎಂದು ದಾವೀದನು ದೇವರನ್ನು ಕೊಂಡಾಡಿದಾಗ ಅದರ ಬಗ್ಗೆ ಹೇಳಿದನು. ಶಿಷ್ಯರ ಪ್ರಾರ್ಥನೆಯ ಕೊನೆಯ ಪದವು ದಾವೀದನ ಮನಸ್ಸಿನಲ್ಲಿದ್ದ ಆ ಸಂಗತಿಯ ಬಗ್ಗೆ ಹೇಳುತ್ತಿರ ಬಹುದುಣಿ ಕೀರ್ತನೆಗಾರನ ಅರ್ಥವು ಥಾಯರ್ ಅವರಿಂದ ಕೊಡಲ್ಪಟ್ಟದ್ದೇ ಆಗಿರಬಹುದು: "ರಾಜಯೋಗ್ಯ ಶಕ್ತಿ, ಅರಸೊತ್ತಿಗೆ, ಪ್ರಭುತ್ವ, ಆಳಿಕೆ."[7]

ಈ ನಂತರದ ಅರ್ಥವು ಯಾವ ಭಾವನೆಯನ್ನು ಹೇಳುತ್ತದೆ? ಅದರ ಅರ್ಥ ಪ್ರತಿಯೊಂದೂ ದೇವರ ಆಳಿಕೆಯ ನೇತೃತ್ವದಲ್ಲಿರುತ್ತದೆ ಎಂಬುದುಣಿ "ಪ್ರಭುತ್ವವು ಹಾಗೂ ಬಲವು ಮತ್ತು ನಾಯಕತ್ವವು ನಿನ್ನದೇ." ಇದು ದೇವರ ವಿಶ್ವವು, ಮತ್ತು ಅಸ್ತಿತ್ವದಲ್ಲಿರುವದೆಲ್ಲವೂ ಆತನ ಸೂಚನೆ ಇಲ್ಲವೇ ಆತನ ಅಪ್ಪಣೆಯಿಂದ ಆದದ್ದಾಗಿದೆ. ಆತನಿಗೆ ಮಿತಿಯಿಲ್ಲದ ಸಾರ್ವಭೌಮತೆ ಇರುತ್ತದೆ. ಬೈಬಲಿನ ದೇವರ ಅಧಿಕಾರವನ್ನು ನಾವು ವಿವರಿಸುವಾಗ, ಪರಲೋಕ ಭೂಲೋಕಗಳ ಒಬ್ಬನೇ ದೇವರನ್ನು ಗೌರವಿಸುತ್ತೇವೆ. ಜನಾಂಗಗಳ ಎಲ್ಲಾ ದೇವರುಗಳು ವಿಗ್ರಹಗಳು (ಕೀರ್ತನೆ 96:5), ಅವು ನೋಡಲಾರವು, ಕೇಳಲಾರವು ಇಲ್ಲವೇ ಗ್ರಹಿಸಲಾರವು ಎಂದು ಹೇಳುತ್ತೇವೆ (ದಾನಿಯೇಲ 5:23). ಗರ್ವದ ಮತ್ತು ಬುದ್ಧಿವಂತರಾದ ದೇವರುಗಳು (ಸ್ವಯಂ - ದೈವೀಕರಿಸುವಿಕೆ ಹಾಗೂ ಮನಸ್ಸಿನ ಆರಾದನೆ) ವ್ಯರ್ಥವಾದವುಗಳೂ ಬಲಹೀನವಾದವುಗಳೂ ಎಂದು ತಿಳಿಯುತ್ತೇವೆ. ನಾವು ಎಲ್ಲಿ ನಿಂತಿದ್ದೇವೆಂಬುದನ್ನು ದೇವರು ತಿಳಿಯುವಂತೆ ಮಾಡುತ್ತೇವೆ:

> ಅನೇಕರನ್ನು ದೇವರುಗಳೆಂದೂ ಕರ್ತರೆಂದೂ ಪೂಜಿಸುವದುಂಟು ನಿಜವೇಣಿ ಆಕಾಶದಲ್ಲಿ ಯಾಗಲಿ ಭೂಮಿಯ ಮೇಲೆಯಾಗಲಿ ದೇವರೆನಿಸಿಕೊಳ್ಳುವವರು ಇದ್ದಾರೆ, ನಮಗಾದರೋ, ಒಬ್ಬನೇ ದೇವರಿದ್ದಾನೆ ಆತನು ತಂದೆಯೇ. ಆತನು ಸಮಸ್ತಕ್ಕೂ ಮೂಲ ಕಾರಣನು ಹಾಗೂ ನಾವು ಆತನಿಗಾಗಿ ಉಂಟಾದೆವುಣಿ ಮತ್ತು ನಮಗೆ ಒಬ್ಬನೇ ಕರ್ತನುಣಿ ಆತನು ಯೇಸು ಕ್ರಿಸ್ತನೇ, ಆತನಿಂದ ಎಲ್ಲಾ ಸಂಗತಿಗಳು ಉಂಟಾದವು ಮತ್ತು ಆತನ ಮುಖಾಂತರ ಅಸ್ತಿತ್ವದಲ್ಲಿರುವೆವು (1 ಕೊರಿಂಥ 8:5, 6).

> ಯೆಹೋವನು ರಾಜ್ಯಾಧಿಕಾರವನ್ನು ವಹಿಸಿದ್ದಾನೆ (ಕೀರ್ತನೆ 93:1).

> ನೀನೊಬ್ಬನೇ ದೇವರು (ಕೀರ್ತನೆ 86:10).

ಜಲಪ್ರಳಯದ ಬಬಿಲೋನಿಯ ಸಾಂಪ್ರಾದಾಯಕ್ಕೆ ಸಂಬಂಧಿಸಿ ದೇವರುಗಳು[8] ಜಗಳವಾಡಿದವು ಹಾಗೂ ತಮ್ಮೊಳಗೆ ಕೋಪಗೊಂಡವು.[9] ಆದರೆ ಬೈಬಲಿನ ದೇವರು, ಒಬ್ಬನೇ ದೇವರು, ನೋಹನನ್ನೂ ದುಷ್ಟ ಜನರನ್ನೂ, ಇಡೀ ಜಗತ್ತನ್ನೂ ಸಂಪೂರ್ಣ ವಾಗಿ ತನ್ನ ವಶದಲ್ಲಿಟ್ಟು ಕೊಂಡನು. ಬಬಿಲೋನಿನ ಕಥೆಯು ತನ್ನ ದೇವರುಗಳನ್ನು ಯಜಮಾನರಂತೆ ಮಹಿಮೆಪಡಿಸಲಿಲ್ಲ. ಅವು ನೀರಿನ ಕಡೆಗೆ ಹೆದರಿ, "ನಾಯಿಗಳಂತೆ ಭಯದಿಂದ ಓಡಿಹೋದವು." "ರಾಜ್ಯವು ನಿನ್ನದು," ಆಳಿಕೆಯು ನಿನ್ನದು ಎಂದು ಹೇಳು ವಾಗ, "ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು" (ಧರ್ಮೋಪದೇಶಕಾಂಡ 6:4) ನೀವು ಹೇಳುತ್ತೀರಿ. ಗಾಳಿಯೂ ಸಮುದ್ರವೂ ಆತನ ಮಾತುಗಳನ್ನು ಕೇಳುತ್ತವೆ ಎಲ್ಲಾ ಜನರೂ "ಆತನ ಪ್ರಜೆಗಳೂ ಆತನು ಪಾಲಿಸುವ ಹಿಂಡೂ" ಆಗಿದ್ದಾರೆ (ಕೀರ್ತನೆ 100:3).

ಪುರಾತನ ಪರ್ಶಿಯನ್ ಧರ್ಮದ ಝೊರೊ ಆಸ್ಟ್ರಿಯಾನಿಜಮ್‌ದಲ್ಲಿ ಇಬ್ಬರು ವಿರುದ್ಧ ದೇವರುಗಳು ಇರುವರು: Ormazd (ಒಳ್ಳೆಯದರ ಹಾಗೂ ಬೆಳಕಿನ ದೇವರು)

ಹಾಗೂ Ahriman (ಕೆಡುಕಿನ ಹಾಗೂ ಕತ್ತಲೆಯ ದೇವರು).[10] ಇದಕ್ಕೆ ವಿರುದ್ಧವಾಗಿ, ಬೈಬಲು ಒಬ್ಬನೇ ದೇವರನ್ನು ತಿಳಿದಿರುವುದು. ಆತನ ರಾಜ್ಯವು ಸಮಯದಲ್ಲಿ ಹಾಗೂ ಸ್ಥಳದಲ್ಲಿ, ಮನಸ್ಸಿನಲ್ಲಿ ಹಾಗೂ ಪದಾರ್ಥದಲ್ಲಿ ಹಾಗೂ ಅತ್ಮದಲ್ಲಿ ಇರುವುದು. ಇದು ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ಕೆಡುಕಿಗೆ ಆತನನ್ನು ಜವಾಬ್ದಾರನನ್ನಾಗಿ ಮಾಡುವುದೋ? ಇಲ್ಲ, ಆತನು ನಿರ್ವಂಚಕನಾದ ನಂಬಿಗಸ್ತ ದೇವರು (ಧರ್ಮೋಪದೇಶಕಾಂಡ 32:4)ಣಿ ನ್ಯಾಯವಂತನೂ ನೀತಿವಂತನೂ ಆಗಿದ್ದಾನೆ. ರಾಜ್ಯದ, ಜಗತ್ತಿನ ಆಡಳಿತೆಯು ಅಷ್ಟು ಸಂಪೂರ್ಣವಾಗಿರುವುದು. ಕೆಡುಕನ್ನು ಸಂಭವಿಸಲಿಕ್ಕೆ ಆತನು ಬಿಡುವಾಗ ಅದು ದೇವರಿಗೆ ಒಳಪಟ್ಟಿರುವುದು. “ನಾನು ಬೆಳಕಿಗೂ ಕತ್ತಲಿಗೂ ಸೃಷ್ಟಿಕರ್ತನು, ಮೇಲನ್ನೂ ಕೇಡನ್ನೂ ಬರ ಮಾಡುವವನು, ಈ ಸಮಸ್ತ ಕಾರ್ಯಗಳನ್ನು ನಡೆಯಿಸುವ ಯೆಹೋವನು ನಾನೇ” (ಯೆಶಾಯ 45:7) ಎಂದು ಆತನು ಹೇಳುತ್ತಾನೆ.

ಈ ಮಾತುಗಳನ್ನು ಫರ್ಶಿಯನ್ ಧರ್ಮವನ್ನು ತಿಳಿದ ಅರಸ ಕೋರೆಷನಿಗೆ ಹೇಳಿರುವದೆಂಬುದನ್ನು ಜ್ಞಾಪಿಸಿಕೊಳ್ಳಿರಿ. ರಾಜ್ಯಾಡಳಿತೆಯು ತನ್ನದೆಂದು ದೇವರು ಅವನಿಗೂ ನಮ್ಮೆಲ್ಲರಿಗೂ ತಿಳಿಯುವಂತೆ ಮಾಡಿದನು: “ನಾನೇ ಯೆಹೋವನು, ಇನ್ನು ಯಾವನೂ ಅಲ್ಲ, ನನ್ನ ಹೊರತು ಯಾವ ದೇವರೂ ಇಲ್ಲ” (ಯೆಶಾಯ 45:5).

ಒಬ್ಬ ದೇವದೂತನು (ಯೂದ 6) ದೇವರ ಆಳಿಕೆಗೆ ವಿರೋಧವಾಗಿ ದಂಗೆಯೆದ್ದರೂ ಅವನು ಇನ್ನೂ ದೇವರ ಹಸ್ತದ ಕೆಳಗಿರುವನು. ಮಹಾದಿನದ ನ್ಯಾಯ ತೀರ್ವಿಕೆಯ ವರೆಗೆ ಕತ್ತಲೆಯಲ್ಲಿ ಇಡಲ್ಪಡುವದಕ್ಕಾಗಿ ಅವನು ಪರಲೋಕದಿಂದ ಹೊರಗೆ ದೊಬ್ಬಲ್ಪಟ್ಟನು. ಅಂಥ ದಂಗೆಖೋರನು ರಾಜ್ಯವು ದೇವರದೆಂದು ತಿಳಿದು ಕೊಂಡಿರುವನುಣಿ ನಡುಗುತ್ತ, ತನಗೆ ಸಮೀಪವಾಗಿರುವ ಹಿಂಸೆಯ ಸಮಯದ ಬಗ್ಗೆ ಅವನು ಚಿಂತಿಸುವನು. ಆದಾಮ ಮತ್ತು ಹವ್ವರು ತೋಟದಲ್ಲಿ ಶೋಧಿಸಲ್ಪಟ್ಟಂತೆ ಶೋಧಿಸಲು ಅವನು ಬಿಡಲ್ಪಡಬಹುದು. ಯೋಬನಂಥವರ ಮೇಲಿನಂತೆ ಪ್ರಯತ್ನಿಸಲೂ ಅವನು ಬಿಡಲ್ಪಡಬಹುದು. ಆದರೆ ಅಂಥ ಶೋಧನೆಯು ನಿರ್ಬಂಧಗಳೊಳಗೆ ಇಡಿಸಲ್ಪಟ್ಟಿದೆ. ಪರಲೋಕದ ದೇವರು ಸಂಪೂರ್ಣವಾಗಿ ವಶದಲ್ಲಿಟ್ಟು ಕೊಂಡಿದ್ದಾನೆ, ಮತ್ತು ಮನಸ್ಸಿಲ್ಲದ ಸೈತಾನನು ಒಪ್ಪಿಕೊಳ್ಳಬೇಕು. ದೇವರು ಯಾವುದಕ್ಕೆ ಅಪ್ಪಣೆಕೊಡುತ್ತಾನೋ ಅದನ್ನು ಮಾಡಲು ಅಪವಾದಿಯು ಜಿಗಿಯುತ್ತಾನೆ, ಆದರೆ ದೇವರು ನಿಯಂತ್ರಣದಲ್ಲಿದ್ದು ಕೊಂಡು ತನ್ನ ಎಲ್ಲಾ ಯೋಜನೆಗಳಲ್ಲಿ ಎಲ್ಲಾ ಸಂಗತಿಗಳು ಸೇವೆ ಮಾಡುವಂತೆ ಮಾಡುವನು. ಆತನು ಇದನ್ನು ಹೇಗೆ ಮಾಡುವನು? ಆತನು ಅದನ್ನು ಮಾಡಬಲ್ಲನು, ಯಾಕಂದರೆ ರಾಜ್ಯವು, ಆಡಳಿತೆಯು ಆತನದಾಗಿರುತ್ತದೆ. ಎಲ್ಲಾ ಸಂಗತಿಗಳು ಆತನವು, ಆತನ ಮುಖಾಂತರವಾಗಿದ್ದವುಗಳೂ ಆತನಿಗಾಗಿ ಇರುವಂಥವುಗಳು ಆಗಿವೆ. ಅರಸರು ಆತನ ಅಪ್ಪಣೆಯಿಂದ ಆಳುವರು. ಯಾಕಂದರೆ ಆತನು ರಾಜರುಗಳ ರಾಜನು ಆಗಿದ್ದಾನೆ ಮತ್ತು ಎಲ್ಲವುಗಳ ಮೇಲೆ ಒಡೆಯನಂತೆ ಮೇಲಕ್ಕೇರಿಸಲ್ಪಟ್ಟಿದ್ದಾನೆ.

ಕ್ರಿ.ಶ. 30ರಲ್ಲಿಯ ಪಂಚಾಶತ್ತಮ ದಿನದಂದು, ದೇವರು ಪರಲೋಕದಲ್ಲಿಯ, ಭೂಲೋಕದಲ್ಲಿಯ ಮತ್ತು ಭೂಲೋಕದ ಕೆಳಗಿರುವ ಎಲ್ಲಾ ಅಧಿಕಾರವನ್ನು ಇಷ್ಟಪೂರ್ವಕವಾಗಿ (ಮತ್ತಾಯ 28:18ಣಿ ಫಿಲಿಪ್ಪಿ 2:10) ತನ್ನ ಒಬ್ಬನೇ ಕುಮಾರನಿಗೆ ಒಪ್ಪಿಸಿ ಕೊಟ್ಟಿದ್ದಾನೆ. ಕುಮಾರನು ಈಗ ತನ್ನ ಸ್ವಂತ ರಾಜ್ಯದ ಅರಸನು ಮಾತ್ರವೇ ಅಲ್ಲ (ಹೊರಗೆ ಕರೆಯಲ್ಪಟ್ಟವರು, ರಾಜ್ಯದ ಮಕ್ಕಳು) ಭೂರಾಜರ ಒಡೆಯನೂ ಆಗಿದ್ದಾನೆ (ಪ್ರಕಟನೆ 1:5). ಹೀಗಿರುವಲ್ಲಿ ಆತನು ಕಾಲದ ಅಂತ್ಯದ ವರೆಗೆ ಮುಂದುವರಿಯುವನು (1 ಕೊರಿಂಥ 15:24). ಆಗ ಆತನು ರಾಜ್ಯವನ್ನು ತನ್ನ ತಂದೆಗೆ ಒಪ್ಪಿಸುವನು.

ನಿಶ್ಚಯವಾಗಿಯೂ, ಆ ಎಲ್ಲಾ ಅಧಿಕಾರವನ್ನು ಯೇಸುವಿಗೆ ಕೊಟ್ಟಾತನು ತನ್ನನ್ನು

ತನ್ನ ಕುಮಾರನಿಗೆ ಒಪ್ಪಿಸಲಿಲ್ಲ. ಕುಮಾರನು ರಾಜ್ಯವನ್ನು ಒಪ್ಪಿಸಿಕೊಡುವಾಗ ಆತನು ತನ್ನನ್ನೂ ನಮ್ಮನ್ನೂ ಒಪ್ಪಿಸಿಕೊಡುವನು ಹಾಗೂ ಎಲ್ಲಾ ಸಂಗತಿಗಳು ಪುನ ಮಹಾ ದೇವರ ಆಧೀನತೆಗೆ, ಆತನು "ಸಮಸ್ತರಲ್ಲಿಯೂ ಸಮಸ್ತವೂ ಆಗಿರುವಂತೆ" ಒಪ್ಪಿಸಿ ಕೊಡುವನು (1 ಕೊರಿಂಥ 15:28). ಆತನ ಹೇಳಲಾರದಂಥ ವರಗಳಿಗಾಗಿಯೂ ಕೃಪೆಗಾಗಿಯೂ ಆತನಿಗೆ ಕೃತಜ್ಞತೆಗಳು! ಆತನ ಜ್ಞಾನಕ್ಕೂ ಆಲೋಚನೆಗೂ ನಮ್ಮ ದೇವರಿಗೆ ಸ್ತೋತ್ರವಾಗಲಿ!

> ಯೆಹೋವನು ಮೇಲಿನ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆಣಿ
> ಆತನು ಸಮಸ್ತವನ್ನೂ ಆಳುತ್ತಾನೆ.
> ದೇವದೂತರೇ, ಆತನ ಶಬ್ದಕ್ಕೆ ಕಿವಿಗೊಡುವವರೆ,
> ಆತನ ಆಜ್ಞೆಯನ್ನು ನೆರವೇರಿಸುವ ಪರಾಕ್ರಮ ಶಾಲಿಗಳೇ,
> ಯೆಹೋವನನ್ನು ಕೊಂಡಾಡಿರಿ.
> ಆತನ ಸೈನ್ಯಗಳೇ,
> ಆತನ ಮೆಚ್ಚಿಕೆಯನ್ನು ನೆರವೇರಿಸುವ ಸೇವಕರೇ,
> ಯೆಹೋವನನ್ನು ಕೊಂಡಾಡಿರಿ.
> ಆತನ ರಾಜ್ಯದ ಸರ್ವ ಸ್ಥಳಗಳಲ್ಲಿರುವ ಎಲ್ಲಾ ಸೃಷ್ಟಿಗಳೇ
> ಯೆಹೋವನನ್ನು ಕೊಂಡಾಡಿರಿ.
> ನನ್ನ ಮನವೇ ಯೆಹೋವನನ್ನು ಕೊಂಡಾಡು!
> (ಕೀರ್ತನೆ 103:19-22).

## "ಹಾಗೂ ಬಲವೂ"

**ದೈಹಿಕ ಬಲ**

ದೇವರ ರಾಜ್ಯದ ಅರ್ಥದ ಬಗ್ಗೆ ನಾವು ಧ್ಯಾನಿಸುವಾಗ, ಶಿಷ್ಯರ ಪ್ರಾರ್ಥನೆಯ ಕೊನೆಯ ಚಿನ್ನಹದಲ್ಲಿಯ ಎರಡನೆಯ ಸಂಗತಿಯ ಬಗ್ಗೆ ಸಹ ಕೆಲವೊಂದನ್ನು ಕಲಿತುಕೊಳ್ಳುತ್ತೇವೆ: "ಬಲವು." ಸರ್ವಶಕ್ತನ ಬಲದ ಬಗ್ಗೆ ನಾವು ಕೇಂದ್ರೀಕರಿಸು ವಾಗ ಆಶ್ಚರ್ಯ ಚಕಿತರಾಗುತ್ತೇವೆ. ಆತನು ನಮ್ಮ ಅದ್ಭುತಕರವಾದ ಭೂಮಿಯನ್ನು ಮಾಡಿ, ಮನಸ್ಸಿನಿಂದ ಹಾಗೂ ಪದಾರ್ಥದಿಂದ ತುಂಬಿಸಿದ್ದಲ್ಲದೇ ಯಾವ ಆಧಾರವೂ ಇಲ್ಲದೇ ತೂಗುಹಾಕಿದನು (ಯೋಬ 26:7). ಆತನ ಭೌತಿಕ ವಿಶ್ವವು ಬಹಳ ವಿಶಾಲವಾ ಗಿರುವುದು, ಅದು ಆತನ ಸೃಷ್ಟಿಯಲ್ಲಿ ಚಿಕ್ಕ ಭಾಗವಾಗಿರುವುದು, ಅದರ ಅಳತೆಗಳನ್ನು ಮನುಷ್ಯನ ಅತೀ ಬಲವಾದ ಟೆಲೆಸ್ಕೋಪಗಳು ಅಳತೆ ಮಾಡಲಾರವು. ಹಗಲು ರಾತ್ರಿ ಗಳನ್ನು ಮಾಡುತ್ತ ನಮ್ಮ ಜಗತ್ತು ತಾಸಿಗೆ ಒಂದು ಸಾವಿರ ಮೈಲುಗಳಂತೆ ತನ್ನ ಕಕ್ಷದಲ್ಲಿ ತಿರುಗುವಂತೆ ಮಾಡುವದಲ್ಲದೆ, ಅದೇ ಸಮಯದಲ್ಲಿ ನಮ್ಮ ಜಗತ್ತು ಸುಮಾರು ಒಂದು ಬಿಲಿಯನ್ ದೂರದ ಅದೃಶ್ಯರೂಪದ ಮಾರ್ಗದಲ್ಲಿ ಒಂದು ಸೆಕಂಡಿಗೆ ಹದಿನೆಂಟು ಮೈಲುಗಳ ವೇಗದಲ್ಲಿ ಸೂರ್ಯನ ಸುತ್ತ ಸುತ್ತುವಂತೆ ಮಾಡಿರುವನು. ಪ್ಲೂಟೋ ಗ್ರಹಕ್ಕೆ ಆತನ ಮಾರ್ಗವು $3\frac{1}{2}$ ಬಿಲಿಯನ್ ಮೈಲು ಉದ್ದವಾಗಿರುವುದು - ಸೂರ್ಯನ ಸುತ್ತಲು ಒಂದು ಸಲ ಸುತ್ತುವದಕ್ಕೆ ಪ್ಲೊಟೋಕ್ಕೆ 248ಕ್ಕಿಂತ ಹೆಚ್ಚು ವರ್ಷಗಳು ಬೇಕಾ ಗುವವು. ರೇಡಿಯೋ, ಸಂದೇಶವು ಜಗತ್ತಿನ ಸುತ್ತಲೂ ಒಂದು ಸೆಕಂಡಿಗೆ ಏಳು ಸಲ ಪ್ರಯಾಣಿಸುವುದು. ಅತೀ ಸಮೀಪದಲ್ಲಿರುವ ನಕ್ಷತ್ರವು, ಆ ನಕ್ಷತ್ರದಿಂದ ಅದೇ ಸಂದೇ

ಶವು ಭೂಮಿಯನ್ನು ತಲುಪಲು ನಾಲ್ಕು ವರ್ಷಕ್ಕಿಂತಲೂ ಹೆಚ್ಚು ಸಮಯ ಬೇಕಾಗುವಷ್ಟು ದೂರದಲ್ಲಿ ಇದೆ. "ನಿಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿ ಕೊಂಡು ನೋಡಿರಿ! ಈ ನಕ್ಷತ್ರಗಳನ್ನು ಸೃಷ್ಟಿಸಿದಾತನು ಯಾರು? ಅವುಗಳ ಸೈನ್ಯವನ್ನೆಲ್ಲಾ ಲೆಕ್ಕಮಾಡಿ ಹೊರಗೆ ತರುವನುಣಿ ಎಲ್ಲವನ್ನೂ ಹೆಸರೆತ್ತಿ ಕರೆಯುತ್ತಾನೆಣಿ ಆತನ ಮಹಾಶಕ್ತಿಯಿಂದಲೂ, ಮತ್ತು ಆತನು ಅತಿ ಬಲಾಢ್ಯನಾಗಿರುವದರಿಂದ, ಅವುಗಳೊಳಗೆ ಒಂದೂ ತಪ್ಪದು," ಎಂದು ಯೆಶಾಯ 40:26 (ASV) ದಿಂದ ತೆಗೆದು ಕೊಂಡ ಒಂದು ಬರಹವು ಹೇಳುತ್ತದೆ. ಈ ಬರಹವು ಮಸ್ಸಾಚುಸೆಟ್ಸದ ವಿಲಿಯಮ್ಸ್ ಟೌನದಲ್ಲಿಯ ವಿಲಿಯಮ್ಸ್ ಕಾಲೇಜಿನ ಹೊಪ್‌ಕಿನ್ಸ ಒಬ್ಸರ್ವೇಟರಿಯ ಗೋಡೆಯ ಮೇಲೆ ಇರುತ್ತದೆ. ಒಬ್ಬನು ಪ್ರೇರೇಪಿಸಲ್ಪಡಬೇಕಾಗಿಲ್ಲ, ಆದರೆ ಸ್ವಾಭಾವಿಕವಾದ ದರ್ಶನವು ವಿಶ್ವದ ಆಶ್ಚರ್ಯಕರವಾದ ಗಾತ್ರದ ಬಗ್ಗೆ ದಾವೀದನೊಂದಿಗೆ ಆಶ್ಚರ್ಯಪಡಲು ಬೇಕಾಗುತ್ತದೆ:

ನಿನ್ನ ಕೈಕೆಲಸವಾಗಿರುವ ಆಕಾಶಮಂಡಲವನ್ನೂ,<br>
ನೀನು ಉಂಟುಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು ನೋಡುವಾಗಣಿ<br>
ನೀನು ಮನುಷ್ಯನನ್ನು ನೆನಸಲು ಅವನು ಎಷ್ಟು ಮಾತ್ರದವನು?<br>
ನರಪುತ್ರನನ್ನು ಲಕ್ಷ್ಯವಿಡಲು ಅವನು ಎಷ್ಟರವನು?<br>
(ಕೀರ್ತನೆ 8:3, 4ಣಿ 33:6-9 ಸಹ ನೋಡಿರಿ).

**ಆತ್ಮಿಕ ಬಲ**

ದೇವರ ಪ್ರಾಪಂಚಿಕ ಸೃಷ್ಟಿಯನ್ನು ಹುಟ್ಟಿಸಿದ ಶಕ್ತಿಯು ಭಕ್ತಿಯನ್ನು ಪ್ರೇರಿಸುವಂಥದ್ದಾಗಿದ್ದಂತೆ, ಪಾಪಿಗಳನ್ನು ಭಕ್ತರನ್ನಾಗಿ ಮಾಡುವಲ್ಲಿ ಆತನ ಶಕ್ತಿಯು ದೀನತೆಯುಳ್ಳದ್ದೂ ಚಕಿತಗೊಳಿಸುವಂಥದ್ದೂ ಆಗಿರುತ್ತದೆ. ಅಣುವಿನಲ್ಲಿ ದೇವರು ಇಟ್ಟ ಎಲ್ಲಾ ಶಕ್ತಿಯು ಸಾಧಾರಣವಾದ ಸುವಾರ್ತಾ ಪ್ರಸಂಗಕ್ಕೆ - ದೇವರ ರಕ್ಷಿಸುವ ಶಕ್ತಿಗೆ ಸಮನಾಗಲಾರದು. ಬಾಂಬುಗಳು ಭಯಪಡಿಸಬಹುದು, ಆದರೆ ಅವು ಮಾರ್ಪಡಿಸಲಾರವು. ದೇವರ ಪ್ರೀತಿಯ ಬಗ್ಗೆ ಪಾಪಿಯೊಂದಿಗೆ ಮೌನವಾಗಿ ಮಾತಾಡುವದರಿಂದ ದೇವರ ದೀನ ಮಗುವು ಸಾಧಿಸುವಷ್ಟನ್ನು ಲೋಕದ ಯಾವುದೇ ಶಕ್ತಿಯು ಮಾಡಲಾರದು. ದೇವರ ಆ ದೀನ ಸೇವಕನು ದೇವರೊಂದಿಗೆ ಜೊತೆ ಕೆಲಸದವನಾಗಿರುವನು. ಮನುಷ್ಯನ ಆತ್ಮದ ಮೇಲೆ ದೇವರ ಶಕ್ತಿಯನ್ನು ತರುವ ಸಾಧನವು ಅವನಾಗಿರುವನು. ಯೇಸುವು ಶಿಲುಬೆಯ ಮೇಲೆ ಎತ್ತರದಲ್ಲಿಡಲ್ಪಟ್ಟ ಮತ್ತು ಆತನು ಸಮಾಧಿಯೊಳಗಿಂದ ಎಬ್ಬಿಸಲ್ಪಟ್ಟ ಶುಭ ಸಮಾಚಾರವನ್ನು ಹೇಳುತ್ತಾನೆ. ಸುವಾರ್ತೆಯ ಪೂರ್ಣ ಬಲವು ಪರಿಣಾಮ ಕಾರಿಯಾಗಿ ಮೃದುವಾದ ಹೃದಯವುಳ್ಳವರ ಮೇಲೆ ಕಾರ್ಯ ಮಾಡುವಾಗ, ಯಾವುದೇ ಸಂಬಂಧಿಕ ಹಾಗೂ ಯಾವುದೇ ಗಲಿಬಿಯು ಬಾಪ್ತಿಸ್ಮದಲ್ಲಿ ಯೇಸುವಿಗೆ ತನ್ನನ್ನು ಸಮರ್ಪಿಸಿ ಕೊಡುವುದನ್ನು ನಿಲ್ಲಿಸಲಾರದು. ದೇವರ ಬಲವು - ಉತ್ತರದ ಗಾಳಿಯಲ್ಲಿ ಇಲ್ಲವೇ ಸೂರ್ಯನ ಕಿರಣಗಳಲ್ಲಿ ಇರುವ ಆತನ ಬಲಕ್ಕಿಂತ ಭಿನ್ನವಾದದ್ದು, ಆದರೆ ದೇವರ ಬಲವು - ಸ್ವಾರ್ಥಿಯಾದ, ಪಾಪದಿಂದ ತುಂಬಿದ ವ್ಯಕ್ತಿಯನ್ನು (ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟವನು) ನೂತನ ಸೃಷ್ಟಿಯಾಗಿ ಬದಲಾಯಿಸುವನು. ದೇವರು ಅದ್ಭುತಕರವಾದ ಕಾರ್ಯಗಳನ್ನು ಮಾಡುವನು! (ನೋಡಿರಿ ಕೀರ್ತನೆ 86:10.) ಕೆಟ್ಟುಹೋದ ಮಾನವನು ಪರಲೋಕದ ಶಕ್ತಿಯಿಂದ ನೀತಿಯ ಕಡೆಗೆ ಹಾಗೂ ನಿಜವಾದ ಪವಿತ್ರತೆಯ ಕಡೆಗೆ ಪರಿವರ್ತಿಸುವನು.

**ನಿತ್ಯವಾದ ಬಲ**

ನಾವು ಹೊಸದಾಗಿ ಹುಟ್ಟಿದ್ದರಿಂದ ವಿಫುಲವಾದ ಕೃತಜ್ಞತಾಸ್ತುತಿಯಲ್ಲಿ ಹರ್ಷಪಡುವೆವು. ಶರೀರ ಭಾವದಿಂದ ಹೊರಗೆ ನಾವು ಪುನ ಜೀವಿಸುವ ವರಾಗಿರುವದರಿಂದಲೂ ಸಹ ನಾವು ಆನಂದ ಪಡುವೆವು, "ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಅತಿಶಯವಾದ ಪಾರಾಕ್ರಮದ" ನಿಮಿತ್ತವಾಗಿ (ಎಫೆಸ 1:19ಎ) ಇದು ಸತ್ಯವಾಗಿದೆ. "ದೇವರು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದಾಗ ಕ್ರಿಸ್ತನಲ್ಲಿ ಸಾಧಿಸಿದ ಆತನ ಶಕ್ತಿಯ ಬಲದ ಕಾರ್ಯಾಚರಣೆಗೆ ಅನುಗುಣವಾಗಿ" ದೇವರೊಂದಿಗೆ ಸದಾಕಾಲವೂ ಜೀವಿಸುವುದು ನಮ್ಮ ಬಾಧ್ಯತೆಯಾಗಿದೆ (ಎಫೆಸ 1:19ಬಿ, 20). "ಕರ್ತನಾದ ಯೇಸುವನ್ನು ಎಬ್ಬಿಸಿದಾತನು ನಮ್ಮನ್ನು ಸಹ ಯೇಸುವಿನೊಂದಿಗೆ ಎಬ್ಬಿಸಿ ನಿಮ್ಮ ಜೊತೆಯಲ್ಲಿ ತನ್ನ ಮುಂದೆ ನಿಲ್ಲಿಸುವನೆಂದು ತಿಳಿದವರಾಗಿದ್ದೇವೆ" (2 ಕೊರಿಂಥ 4:14) ಹಾಗೂ ಎಲ್ಲಾ ಸಂಗತಿಗಳು ನಮ್ಮವುಗಳು ಎಂದು ತಿಳಿದಿದ್ದೇವೆ (1 ಕೊರಿಂಥ 3:21).

ಕೆಟ್ಟುಹೋದ, ಪಾಪದಿಂದ ಶಪಿಸಲ್ಪಟ್ಟ ಹಾಗೂ ಮರಣಾಧೀನವಾದ ಈ ದೇಹ ಗಳನ್ನು ಮಹಿಮೆಯುಳ್ಳ ತನ್ನಂಥ ದೇಹಗಳಾಗಿ ಆತನು ಹೇಗೆ ಬದಲಾಯಿಸಬಲ್ಲನು? ಹೇಗೆ ಎಂಬುದನ್ನು ನಾವು ತಿಳಿದಿರುವದಿಲ್ಲ. ಆದರೆ "ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ, ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾ ದದ್ದನ್ನು ಮಾಡಲು ಶಕ್ತನಾದಾತನ" ಬಲದಲ್ಲಿ ನಮಗೆ ನಂಬಿಕೆಯಿದೆ (ಎಫೆಸ 3:20). ತನ್ನ ಕಾರ್ಯ ಸಾಧಿಸುವಿಕೆಗೆ ಅನುಗುಣವಾಗಿ ಶಕ್ತನಾಗಿರುವನು (ಫಿಲಿಪ್ಪಿ 3:21ಬಿ KJV), ಅವಿಶ್ವಾಸದಲ್ಲಿ ನಾವು ಚಂಚಲವಾಗಿರುವುದಿಲ್ಲ, ಆದರೆ ದೇವರನ್ನು ಮಹಿಮೆಪಡಿಸುವ ವಿಶ್ವಾಸದಲ್ಲಿ ಬಲವಾಗಿ ಬೆಳೆಯಬೇಕು (ರೋಮಾಪುರ 4:20). ನಮ್ಮ ದೇಹಗಳನ್ನು ಎಬ್ಬಿಸಲು ಆತನಿಗೆ ಬಲವು ಇರುವುದು ಎಂಬುದಷ್ಟೇ ಅಲ್ಲ ಆದರೆ ವಿಶ್ವಾಸವಿಲ್ಲದ ಆತ್ಮ ಗಳನ್ನು ಉರಿಯುವ ಬೆಂಕಿಯ ನರಕದೊಳಗೆ ಎಸೆಯುವ ಬಲವೂ ಇರುವುದು ಎಂಬ ಒಂದೇ ವಿಚಾರದ ಬಗ್ಗೆ ನಾವು ಯಾವಾಗಲೂ ಕುತೂಹಲ ಭರಿತರಾಗಿದ್ದೇವೆ (ಲೂಕ 12:5). ಹಾಗೆ ಮಾಡಲು ಆತನು ಬಯಸುವದಿಲ್ಲ, ಆದರೆ ಅತನಿಗೆ ಬಲವಿರುತ್ತದೆ.

## "ಮಹಿಮೆಯು ಎಂದೆಂದಿಗೂ"

ದೇವರ ಆಳಿಕೆಯು ಪ್ರಶ್ನಾತೀತವಾದದ್ದಾಗಿದೆ, ಹಾಗೂ ಆತನ ಬಲವು ಅತಿ ಶ್ರೇಷ್ಠವಾ ದದ್ದಾಗಿದೆ. ಆತನ ಮಹಿಮೆಯು ಪ್ರಕಾಶಮಾನವಾದದ್ದಾಗಿದೆ, ಯಾವುದೇ ಅಗಸನು ಒದಗಿಸದಷ್ಟು ಬೆಳ್ಳಗಾಗಿದೆ. ಮನುಷ್ಯನಾಗಲೀ, ದೇವದೂತನಾಗಲೀ ಯೋಚಿಸುವ ಪ್ರತಿಯೊಂದು ಗೌರವವು ನಮ್ಮನ್ನು ಅಸ್ತಿತ್ವದಲ್ಲಿಟ್ಟು ಮತ್ತು ತನ್ನ ಕೃಪೆಯಿಂದ ನಮ್ಮನ್ನು ವಿಮೋಚಿಸಿದಾತನದ್ದಾಗಿದೆ. ತಂದೆಗೆ ಎಲ್ಲಾ ಮಹಿಮೆಯು ಒಳಪಟ್ಟಿದೆ ಯಾಕೆ ಎಂಬ ಅನೇಕ ಕಾರಣಗಳಲ್ಲಿ ಆತನು ಸಭೆಯನ್ನು ರೂಪಿಸಿದ್ದು ಆಗಿದೆ.

ಅಚ್ಚುಕಟ್ಟಾಗಿ ಹೊಲಿದಿದ್ದ ಮತ್ತು ಸುಂದರವಾಗಿ ಮಾದರಿಯಲ್ಲಿದ್ದ ಕವುದಿಯನ್ನು (quilt) ನೋಡುವಾಗ, ಅದನ್ನು ತಯಾರಿಸಿದ ವ್ಯಕ್ತಿಯನ್ನು ನಾನು ನೋಡದೇ ಇದ್ದರೂ "ಈ ಕವುದಿಗಾಗಿ ಆಕೆಗೆ ಮಹಿಮೆಯಾಗಲಿ" ಎಂದು ನನ್ನಷ್ಟಕ್ಕೆ ನಾನೇ ಯೋಚಿಸುತ್ತೇನೆ. ಕಾಲವು ಪರಿಪೂರ್ಣವಾದಾಗ ದೇವದೂತರು ಮತ್ತು ಪ್ರಾಧಾನ ದೇವದೂತರು ಪರಲೋಕದಿಂದ ಕೆಳಗೆ ದೃಷ್ಟಿಸಿದರು ಮತ್ತು ಸಭೆಯನ್ನು - ವಿಮೋಚಿತರನ್ನು, ಹೊಸದಾಗಿ ಹುಟ್ಟಿದವರನ್ನು ಹಾಗೂ ಹೊರಗೆ ಕರೆಯಲ್ಪಟ್ಟವರನ್ನು - ನೋಡಿದರು. ಪರಲೋಕದ ಸ್ಥಳಗಳಲ್ಲಿಯ

ಪ್ರಭುತ್ವಗಳೂ ಅಧಿಕಾರಗಳೂ ದೇವರ ಸಭೆಯನ್ನು ಮಾಡಿದ ಶುದ್ಧೀಕರಿಸಲ್ಪಟ್ಟ ಜನರನ್ನು ನೋಡಿದಾಗ, ಅವರು ಘನತೆಯಲ್ಲಿ ಪ್ರಕಟಿಸಲ್ಪಟ್ಟ ದೇವರ ಜ್ಞಾನವನ್ನು ನೋಡಿದರು. ಲೋಕದ ಅಸ್ತಿವಾರಕ್ಕಿಂತ ಮೊದಲು ದೇವರ ಮನಸ್ಸಿನಲ್ಲಿ ಇದ್ದದ್ದರ ಬಗ್ಗೆ ಆಶ್ಚರ್ಯಪಟ್ಟರು. ಆತನ ಜ್ಞಾನವು ಪ್ರಕಟಿಸಲ್ಪಟ್ಟದ್ದನ್ನು ನೋಡಿದರು. ಯಾಕಂದರೇ ಪಾಪಿಗಳು ಭಕ್ತರಾಗುವ ಮಾರ್ಗಗಳನ್ನು ದೇವರು ರೂಪಿಸಿದ್ದರು. ಮನುಷ್ಯನಾಗಲೀ ದೇವದೂತರಾಗಲೀ ಸಭೆಯ ವೈಭವವನ್ನು ಯೋಚಿಸುವಾಗ, ಬಿಳಿ ಸಿಂಹಾಸನದ ಕಡೆಗೆ ತಿರುಗಲಿ, ತನ್ನ ಹೊದ್ದಿಕೆಯನ್ನು ತೆಗೆದಿಡಲಿ, ಹಾಗೂ, "ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ. ಆಮೆನ್" (ಎಫೆಸ 3:21) ಎಂದು ಕೂಗಲಿ.

## "ಆಮೆನ್"

ಶಿಷ್ಯರ ಪ್ರಾರ್ಥನೆಯ ಕೊನೆಯ ಚಿನ್ನಹದ ಕೊನೆಯ ಪದ ಹಿಬ್ರೂ ಪದದಿಂದ (*ಆಮೆನ್*) ಬರುತ್ತದೆ. ಅದರ ಅರ್ಥ "ದೃಢಪಡಿಸು, ಹಾಗೆಯೇ ಆಗಲಿ" ಎಂದಾಗುತ್ತದೆ. ಬೈಬಲಿನಲ್ಲೆಲ್ಲಾ ಇದೇ ಅರ್ಥವಿರುತ್ತದೆ: "ಹಾಗೆಯೇ ಆಗಲಿ," "ಅದರಂತಾಗಲಿ" (ಧರ್ಮೋಪದೇಶಕಾಂಡ 27:15-26ಣ 1 ಪೂರ್ವಕಾಲವೃತ್ತಾಂತ 16:36ಣ ನೆಹೆಮೀಯ 8:6ಣ ರೋಮಾಪುರ 1:25ಣ ಇಬ್ರಿಯ 13:21). ಶಿಷ್ಯರ ಪ್ರಾರ್ಥನೆಯನ್ನು ಧ್ಯಾನಿಸುವಾಗ ಅದಕ್ಕೆ ಹೊಸ ಅರ್ಥ ಬರಲಿ.

> ಯೆಹೋವಾ, ಮಹಿಮ ಪ್ರತಾಪ ವೈಭವ ಪರಾಕ್ರಮ ಪ್ರಭಾವಗಳು ನಿನ್ನವುಣ ಭೂಮ್ಯಾಕಾಶಗಳಲ್ಲಿರುವದೆಲ್ಲಾ ನಿನ್ನದೇ, ಯೆಹೋವನೇ, ರಾಜ್ಯವು ನಿನ್ನದುಣ ನೀನು ಮಹೋನ್ನತನಾಗಿ ಸರ್ವವನ್ನೂ ಆಳುವವನಾಗಿರುತ್ತೀ (1 ಪೂರ್ವಕಾಲವೃತ್ತಾಂತ 29:11ಣ ಯೂದ 24, 25 ಸಹ ನೋಡಿರಿ).

---

ಟಿಪ್ಪಣಿಗಳು

[1]J. W. McGarvey, *The New Testament Commentary,* vol 1, *Matthew and Mark* (Lexington, Ky.: N.p., 1875; reprint, Delight, Ark.: Gospel Light Publishing Co., n.d.), 64. [2]Albert Huck, *Synopsis of the First Three Gospels*, 9th ed., ed. Hans Lietzmann, trans, Frank Leslie Cross (New York: American Bible Society, 1936), XI. [3]ಗ್ರೀಕ್ ಮೂಲ ಪ್ರತಿಯ ಹೆಸರು ಗ್ರೀಕ್ ಅಕ್ಷರಮಾಲೆಯ ಎಂಟನೆಯ ಅಕ್ಷರದಿಂದ ಬರುತ್ತದೆ. [4]Charles Fremont Sitterly, "Text and Manuscripts of New Testament," in *International Standard Bible Encyclopedia*, ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 5:2953. [5]J. W. McGarvey, *Evidences of Chrisianity* (Cincinnati: Standard Publishing Co., 1886), 34. [6]C. G. Wilke and Wilibald Grimm, *A Greek-English Lexicon of the New Testament*, trans. and rev. Joseph H. Thayer (Edinburgh, Scotland: T. & T. Clark, 1901; reprint ed., Grand Rapids, Mich.: Baker Book House, 1977), 96-97. [7]Ibid. [8]ಆಧುನಿಕವಾದಿಯಾದ ಎಸ್. ಆರ್. ಡ್ರೈವರ್ ಅವರು ಬೈಬಲಿನ ಬಗ್ಗೆ ಹೀಗೆ ಹೇಳಿದ್ದಾರೆ: "ಬಬಿಲೋನಿನ ಬರಹಗಳು (ಸೃಷ್ಟಿ ಹಾಗೂ ಜಲಪ್ರಳಯ) ಎರಡೂ ಬಹುದೇವತಾ ಆರಾಧನೆಗಳು ಆಗಿವೆ. ಆದರೆ ಅವುಗಳಿಗೆ ಸಮಾನವಾದ ಬೈಬಲಿನಲ್ಲಿಯ ಬರಹಗಳು (ಆದಿಕಾಂಡ 1 ಮತ್ತು

6-9) ಶುದ್ಧವಾದ ಮತ್ತು ಉನ್ನತಕ್ಕೇರಿಸಲ್ಪಟ್ಟ ಏಕ ದೇವವಾದವುಗಳಾಗಿವೆ ...” (quoted in J. McKee Adams, *Ancient Records and the Bible* [Nashville: Broadman Press, 1946], 143). [9]George Frederick Wright, “The Deluge of Noah,” in *International Standard Bible Encyclopedia*, ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 2:823. [10]A. H. Newman, *A Manual of Church History,* vol. 1, *Ancient and Mediaeval Church History (To A.D. 1527)*, rev. and enl. (Philadelphia: American Baptist Publication Society, 1899), 36.